ಓಡಿದರು. ಮೇಲಿನಿಂದ ಉರುಳುರುಳಿ ಬಂದ ಅನೇಕ ಬಂಡೆಗಳು ಇಳಿಜಾರಿನ ಮರಗಳಿಗೊರಗಿ ಅಲ್ಲಲ್ಲಿಯೇ ನಿಂತವು. ಇನ್ನೂ ಕೆಲವು ಮೇಲಿನಿಂದ ಉದುರುವಾಗಲೇ ಆತ ಅದರ ದಿಕ್ಕನ್ನು ಅನುಸರಿಸಿ, ಹಿಂದೆ ಅಥವಾ ಮುಂದೆ ಚಲಿಸಿ ತಪ್ಪಿಸಿಕೊಂಡುಬಿಡುತ್ತಿದ್ದ. ಆದರೂ ಒಮ್ಮೆ ಬಿದ್ದ ಒಂದು ಬಂಡೆಯು ಅವನ ಒಂದು ಕಾಲನ್ನು ಗಾಸಿಗೊಳಿಸಿತು. ಕನಿಷ್ಠ ಒಂದು ವಾರದ ಗಾಯ. ಯಾವಾಗ ಅವನು ಸಾಯಲಿಲ್ಲವೋ ಆಗ ನಾನು ಹೇಳಿದಂತೆಯೇ ಡಕಾಯಿತರ ಆ ಗುಂಪು ಆತನನ್ನು ಆಕ್ರಮಿಸಿತು. ಅವರು ಈಟಿ ಹಿಡಿದು, 'ನಿಮ್ಮ ಬಳಿ ಇರುವುದನ್ನೆಲ್ಲ ಕೊಡು, ಇಲ್ಲದಿದ್ದರೆ ಕೊಲ್ಲುವೆವು' ಎಂದು ಅರ್ಭಟಿಸಿ ಈಟಿ ಭರ್ಜಿಗಳ ಇರಿದು ನಿಂತಿದ್ದಕ್ಕೆ, 'ಈ ಲೋಕದ ದುಃಖಕ್ಕಿಂತ ಹಿರಿದೋ ಈ ನಿಮ್ಮ ಈಟಿ ಭರ್ಜಿಗಳ ತಿವಿತ? ಆ ದುಃಖಕ್ಕಿಂತ ಹಿರಿದೋ ನೀವು ಮಾಡುವ ಈ ಗಾಯ? ನಿಮ್ಮ ಅವಿವೇಕತನಕ್ಕಿಂತ ಮಿಗಿಲಾದ ಯಾವ ಬಾಣವೂ ಇಲ್ಲ. ನಾನು ಏನೆಲ್ಲವನ್ನೂ ಹಿಂದೆ ಬಿಟ್ಟುಬಂದಿರುವೆನು ಎಂಬ ಅರಿವು ನಿಮಗಿಲ್ಲ. ನಾನು ಶಾಕ್ಯರ ರಾಜಕುಮಾರನಾಗಿದ್ದವನು. ನನ್ನೆಲ್ಲ ಸಿರಿಸಂಪತ್ತನ್ನು ಅಲ್ಲಲ್ಲಿಯೇ ಬಿಟ್ಟು, ದುಃಖದಿಂದ ಪಾರಾಗುವ ಸುಖವನ್ನರಸುತ್ತಾ, ಕುರುಡನಿಗೆ ಕಣ್ಣಾಗುವ ಧರ್ಮವನ್ನರಸುತ್ತಾ ಬಂದಿರುವೆ. ನಿಮಗಿಷ್ಟವಿಲ್ಲದಿದ್ದರೆ ಕೊಲ್ಲಬಹುದು ನನ್ನನ್ನು...' ಎಂದು ಕಥೆ ಹೇಳಲು ಶುರು ಮಾಡಿದನಂತೆ. ಇವನ ಮಾತಿಗೆ ಮರುಳಾದ ಆ ಕೊಲೆಗಡುಕರು, ನಾನು ಕೊಟ್ಟ ನಾಣ್ಯವನ್ನು ಮರೆತು ಅವನ ಜೊತೆ ತಮಗೂ ಸುಖದ ದಾರಿ ತೋರಿಸು ಎಂದು ಹಿಂಬಾಲಿಸಿದರಂತೆ. ಎಂಥ ವಿಪರ್ಯಾಸ!

ಕೊನೆಗೆ, 'ಸಿದ್ಧಾರ್ಥ ಏನೇ ವೇಷ ಹಾಕಿಕೊಂಡರೂ ಕಪಟಿ. ಶಾಕ್ಯ ಕುಲದವನು ಅವನು. ಕೋಸಲ, ಮಗಧ, ಶಾಕ್ಯ, ಕೋಲಿಯಗಳನ್ನೆಲ್ಲ ಸುತ್ತುತ್ತಾ, ಅಲ್ಲಲ್ಲಿನದೆಲ್ಲದರ ಆಂತರಿಕ ಗೂಢಚಾರಿಕೆ ಮಾಡುತ್ತಿಲ್ಲವೆಂದು ನಿನಗನಿಸುತ್ತದೆಯೇ?' ಎಂದು ಪಸೇನದಿಗೆ ಕೇಳಿದೆ. ಶಾಕ್ಯ ಕೋಲಿಯರು ಬೀಗರಾದರೂ, ಅವರ ನಡುವಿನ ವೈಷಮ್ಯ ಪಸೇನದಿಗೆ ಗೊತ್ತಿಲ್ಲದ್ದೇನಲ್ಲ. ಪಸೇನದಿಯ ನಿರ್ದೇಶನದಂತೆ ಬುದ್ಧನ ಸುತ್ತ ಗೂಢಚಾರರು ಕಣ್ಣಿಡಲಾರಂಭಿಸಿದರು. ಇದು ಹೇಗೋ ಸಿದ್ಧಾರ್ಥನಿಗೆ ತಿಳಿದುಹೋಯಿತು. ಬಹುಶಃ ಮುಂದೆ ಆ ಗೂಢಚಾರರೂ ಬುದ್ಧನ ಅನುಯಾಯಿಗಳೇ ಆಗಿಬಿಟ್ಟರೇನೋ, ಗೊತ್ತಿಲ್ಲ.

## ಶುದ್ಧೋದನ

ಸಿದ್ಧಾರ್ಥ ಮನೆ ಬಿಟ್ಟು ಹೋಗಿ ಆರು ವರ್ಷಗಳಾಗುತ್ತಾ ಬಂದಿತ್ತು. ಯಶೋಧರೆಯಂತೂ ಮಾನಸಿಕವಾಗಿ ತೀರಾ ಕುಗ್ಗಿಹೋದಂತೆ ಕಂಡುಬರುತ್ತಿದ್ದಳು. ಆದರೂ ಅವಳ ಮುಖದಲ್ಲೊಂದು ಅನೂಹ್ಯ ನಗೆಯಿತ್ತು. ಸಿದ್ಧಾರ್ಥನನ್ನು ಮಗ ರಾಹುಲನಲ್ಲಿ ಕಾಣುತ್ತಿದ್ದಳೇನೋ! ನನಗಂತೂ ಆಡಳಿತದ ಬಗ್ಗೆ ಆಸಕ್ತಿಯೇ ಇರಲಿಲ್ಲ. ಮಗನನ್ನು ರಾಜನನ್ನಾಗಿ ಪಟ್ಟಕ್ಕೇರಿಸಿ ವಿಶ್ರಾಂತಿ ಪಡೆಯುವ ಇಲ್ಲವೇ ವಾನಪ್ರಸ್ಥಾಶ್ರಮಕ್ಕೆ ಹೋಗುವ ಕಾಲವಾಗಿದ್ದರೂ ಮುಂದಿನ ಆಳ್ವಿಕೆಗಾರನಿಲ್ಲದೆ ಅನಿವಾರ್ಯವಾಗಿ ಅಧಿಕಾರದಲ್ಲಿದ್ದೆ. ರಾಹುಲ ಇನ್ನೂ ಆರೇಳು ವರ್ಷದ ಬಾಲಕ. ಅವನಿಗೆ ಪಟ್ಟಕ್ಕೇರಿಸಲು ಸಾಧ್ಯವಿಲ್ಲ. ಆದರೆ ದಂಡಪಾಣಿ ಸುಪ್ರಬುದ್ಧನು ದೇವದತ್ತನ ಸಹಾಯ ಪಡೆದು ನಮ್ಮ ಆಡಳಿತವನ್ನು ಕೊನೆಗೊಳಿಸಿ ತಾನು ಅಧಿಕಾರಕ್ಕೇರಬೇಕೆಂದು ಅಪಾರವಾದ ಶ್ರಮ ಪಡುತ್ತಿರುವನೆಂಬ ವಿಚಾರ ಗೂಢಚಾರರಿಂದ ನನಗೆ ತಿಳಿದುಬರುತ್ತಿತ್ತು. ನನ್ನ ಮಂತ್ರಿಯೇ ಆಗಿದ್ದ ಸುಪ್ರಬುದ್ಧನು ದಂಡಪಾಣಿಯ ಹುದ್ದೆಯಿಂದ ರಾಜನ್ಯ ಪದವಿಯನ್ನು ಪಡೆಯುವುದು ಅಷ್ಟೇನೂ ಕಷ್ಟವಾಗುವುದಿಲ್ಲವೆಂಬ ಅರಿವಿದ್ದುದರಿಂದಲೇ ದೇವದತ್ತನ ಸಹಾಯ ಪಡೆಯುತ್ತಿದ್ದಿರಬಹುದು. ಗೌತಮಿಯಂತೂ ಸಿದ್ಧಾರ್ಥ ಹೊರ ನಡೆದಾಗಿನಿಂದಲೂ ಮಾನಸಿಕವಾಗಿ ಕುಗ್ಗಿಹೋಗಿದ್ದಳು. ತನ್ನ ಸ್ವಂತ ಹೊಟ್ಟೆಯಲ್ಲಿ ಹುಟ್ಟಿದ ಮಗ ನಂದನನಿಗಿಂತಲೂ ಪ್ರೀತಿಯಿಂದ ಸಲಹಿದ್ದ ಸಿದ್ಧಾರ್ಥ, ಹೀಗೆ ವೈರಾಗ್ಯದಿಂದ ಮನೆ ಬಿಟ್ಟು ಕಾಡಲ್ಲಿ ಅಲೆಯುತ್ತಿದ್ದಾನೆಂದು ಅಕ್ಕ ಮಾಯಾಗೆ ಹೇಗೆ ಹೇಳಲಿ ಎಂದು ಪರಿತಪಿಸುತ್ತಿದ್ದಾಳೆ. ಅವಳ ಮನಸ್ಸಿನಲ್ಲಿ ಮಾಯಾದೇವಿ ಇನ್ನೂ ಬದುಕಿಯೇ ಇದ್ದಾಳೆ, ಸಿದ್ಧಾರ್ಥನ ಜವಾಬ್ದಾರಿಯನ್ನು ತನಗೇ ವಹಿಸಿ ಇಲ್ಲೇ ಎಲ್ಲೋ ಹೋಗಿದ್ದಾಳೆ ಎಂದೇ ಭಾವಿಸಿದ್ದಾಳೆ.

ರಾಹುಲನಂತೂ, ನನ್ನ ತೊಡೆಯ ಮೇಲೆ ಕುಳಿತು ಆಟವಾಡುವಾಗಲೆಲ್ಲಾ ನನ್ನನ್ನೇ ಅಪ್ಪ ಎಂದು ಭಾವಿಸಿಬಿಟ್ಟಿದ್ದ. ಆಗ ಆತನಿಗೆ ನಾನು ನಿನ್ನ ತಾತ ಎಂದು ಹೇಳಿಕೊಡುತ್ತಿದ್ದೆ. 'ಹಾಗಾದರೆ ನನ್ನ ತಂದೆ ಯಾರು?' ಎಂದು ಕೇಳುತ್ತಿದ್ದ. 'ತಂದೆಗೆ ಮಕ್ಕಳ ಮೇಲೆ ಪ್ರೀತಿ ಕಡಿಮೆ ಇರುತ್ತದೆ, ಅದಕ್ಕೆ ದೇವರು ಅಜ್ಜ ಅಜ್ಜಿಯರನ್ನು ಸೃಷ್ಟಿ ಮಾಡಿರುತ್ತಾನೆ' ಎಂದು ಸಮಾಧಾನ ಹೇಳುತ್ತಿದ್ದೆ.

'ಹಾಗಾದರೆ ಅಪ್ಪ ಬದುಕಿಲ್ಲವೇ?' ಎಂದು ಆತ ಕೇಳುತ್ತಿದ್ದರೆ ನನ್ನ ಕರುಳು ಕಿವುಚಿದಂತಾಗುತ್ತಿತ್ತು. 'ಹಾಗೆಲ್ಲ ಅಪದ್ಧ ನುಡಿಯಬಾರದು ಮಗು, ನಿನ್ನ ತಂದೆ ಮಹಾ ಜ್ಞಾನಿಯಾಗಲು ತಪಸ್ಸನ್ನಾಚರಿಸಲು ಹೋಗಿದ್ದಾನೆ, ಇನ್ನೇನು ಕೆಲವು ದಿನಗಳಲ್ಲಿಯೇ ಕೆಲಸ ಮುಗಿಸಿಕೊಂಡು ಬಂದುಬಿಡುತ್ತಾನೆ. ನಿನ್ನನ್ನು ನೋಡುವ ಹಂಬಲ ಆತನಿಗೂ ಅತಿಯಾಗಿದೆಯೆಂದು ಹೇಳಿಕಳಿಸಿದ್ದಾನೆ' ಎಂದು ಸಮಾಧಾನ ಮಾಡುತ್ತಿದ್ದೆ. ನಮಗಾದರೂ ಏನು ಕೊರತೆಯಿತ್ತು ತಪಸ್ಸನಾಚರಿಸಲು ಎಂದು ಆತ ಕೇಳಿದ್ದರೆ ನಾನಾದರೂ ಏನು ಹೇಳಬಹುದಾಗಿತ್ತು? ನಿನ್ನ ತಂದೆ ತುಂಬಾ ಮಹತ್ವಾಕಾಂಕ್ಷಿ. ರಾಜನಾದರೆ ಈ ಒಂದು ಸಣ್ಣ ರಾಜ್ಯಕ್ಕೆ ರಾಜನಾಗಬಹುದು. ತನ್ನ ಪರಾಕ್ರಮಗಳಿಂದ ಹೆಚ್ಚೆಂದರೆ ನಮ್ಮಂಥ ನೂರಾರು ಜನಸಂಘಗಳ ಅಧಿಪತಿಯಾದ ಕೋಸಲದ ದೊರೆಯಾಗಬಹುದು. ಇನ್ನೂ ಹೆಚ್ಚೆಂದರೆ ಕೋಸಲದಂಥ ಹತ್ತಾರು ರಾಜ್ಯಗಳ ಅಧಿಪತಿಯಾದ ಮಗಧದ ಚಕ್ರವರ್ತಿಯಾಗಬಹುದಷ್ಟೇ! ಆದರೆ ಇತಿಹಾಸದಲ್ಲಿ ಮಗಧ ರಾಜ್ಯದ ಚಕ್ರವರ್ತಿಯಾದರೂ ಸತ್ತ ಕೆಲ ವರುಷಗಳ ನಂತರ ಯಾರೂ ನೆನಪಿಟ್ಟುಕೊಂಡಿರುವುದಿಲ್ಲ. ಒಂದು ವೇಳೆ ನಮ್ಮದೇ ಸಂತತಿ ಮುಂದಿನ ಪೀಳಿಗೆಯಲ್ಲೂ ರಾಜ್ಯಾಧಿಕಾರವನ್ನು ಮುಂದುವರೆಸಿದ್ದೇ ಆದಲ್ಲಿ, ಹೆಚ್ಚೆಂದರೆ ಎರಡು ಇಲ್ಲವೇ ಮೂರು ತಲೆಮಾರಿನವರೆಗೆ ನೆನಪಿಡಬಹುದಷ್ಟೇ. ಆಮೇಲೆ? ಅದೇ ಬೋಧಿಸತ್ವ ಬುದ್ಧನಾಗಿ ಬಿಟ್ಟರೆ ಅಂಥ ಮಗಧದ ದೊರೆಯೂ ಕರೆದು ಆದರಿಸಿ, ಕಾಲಿಗೆ ಬಿದ್ದು ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಅಂದರೆ ಚಕ್ರವರ್ತಿಗೂ ಮಿಗಿಲಾದ ಪದವಿಯದು. ಈಗಾಗಲೇ ಮಗಧದ ಸಾಮ್ರಾಟ ಬಿಂಬಸಾರ, ಸಿದ್ಧಾರ್ಥ ಗೌತಮನನ್ನು ಕರೆಸಿ ಪಾದಪೂಜೆ ಮಾಡಿ, ಉಪದೇಶವನ್ನೂ ಕೇಳಿದ್ದಾರಂತೆ. ಕೇಳಿ ತಲೆದೂಗಿ, ಶುದ್ಧೋದನನೇ ಧನ್ಯ ಎಂದು ಹೊಗಳಿದರಂತೆ. ಈ ವಿಷಯವನ್ನು ವಕ್ತಾರರು ಹೇಳಿದಾಗ ಮನಸ್ಸು ತುಂಬಿ ಬಂತು. ಆತನನ್ನು ಈಗಲೇ ಕಾಣಬೇಕೆಂಬ ತುಮುಲ ಜಾಸ್ತಿಯಾಗಲಾರಂಭಿಸಿತು.

ಬೋಧಿಯಾದ ಮೇಲೆ ಕಪಿಲವಸ್ತುವಿಗೆ ಹಿಂದಿರುಗಬೇಕೆಂಬ ಷರತ್ತನ್ನು ಹಿಂದೆ ಸಿದ್ಧಾರ್ಥ ಬಿಂಬಸಾರನ ಸಮ್ಮುಖದಲ್ಲಿ ಒಪ್ಪಿಕೊಂಡಿದ್ದಂತೆ, ಬರಲು ಹೇಳಿ ಕಳಿಸಿದೆ. ಅದೂ ಎಷ್ಟು ಬಾರಿ? ಒಂಬತ್ತು ಬಾರಿ ಹೇಳಿ ಕಳಿಸಿದ್ದು! ಆದರೂ ಆತ ಬರಲಿಲ್ಲ. ಅಂದರೇನು ಅರ್ಥ? ಕಪಿಲವಸ್ತು ಅವನಿಗೇನಾದರೂ ಅನ್ಯಾಯ ಮಾಡಿತ್ತೇ? ಹಾಗೆ ನೋಡಿದರೆ ಭೂಮಿಯ ಮೇಲಿನ ಯಾವೊಬ್ಬ ರಾಜಕುಮಾರನಿಗೆ ಎಷ್ಟು ಗೌರವ ಸಿಗುವುದೋ ಅದೆಲ್ಲಕ್ಕಿಂತ ಅಧಿಕವಾದ ಪ್ರೀತಿಯನ್ನು ಕಪಿಲವಸ್ತುವಿನ ಜನ ಕೊಟ್ಟಿದ್ದಾರೆ. ಅದರಲ್ಲೂ ಮಾಯಾದೇವಿ ಅಕಾಲ ಮರಣಕ್ಕೆ ಈಡಾದ ನಂತರವಂತೂ ಆತನಿಗೆ ತಾಯಿಯ ನೆನಪೇ ಬಾರದಿರಲೆನ್ನುವಷ್ಟು ಪ್ರೀತಿಯನ್ನು ಈ ನಾಡು ನೀಡಿದೆ. ಹಾಗಿದ್ದ ಮೇಲೂ ಯಾಕಿಂಥ ವೈರಾಗ್ಯ? ಹತ್ತನೆಯ ಬಾರಿಗೆ ಸಿದ್ಧಾರ್ಥನ ಬಾಲ್ಯದ ಗೆಳೆಯ ಕುಲುದಾಯಿಯನ್ನು ಕರೆದು ಹಿಂದಿನವರಂತೆ ಕೇವಲ ಭರವಸೆಯ ಮೇಲೆ ವಾಪಸ್ಸು ಬರದೇ ಈ ಬಾರಿ ಆತನನ್ನು ಕರೆದುಕೊಂಡು ಬಂದೇ ತೀರಬೇಕೆಂದು ತಾಕೀತು ಮಾಡಿ ಕಳಿಸಿದೆ. ಕುಲುದಾಯಿಗೂ ಅತಿಯಾದ ಆತ್ಮವಿಶ್ವಾಸ. ಬಾಲ್ಯ ಸ್ನೇಹಿತ ಸಿದ್ಧಾರ್ಥ ತನ್ನ ಮಾತಿಗೆ ಇಲ್ಲವೆನ್ನುವುದಿಲ್ಲವೆಂದು. ಎಂದೇ ಬುದ್ಧನಾಗಿದ್ದ ಗೌತಮ ಬರಲು ಒಪ್ಪಿದನಂತೆ. ಬಿಂಬಸಾರ ಬುದ್ಧನಿಗಾಗಿ ವಿಶಾಲವಾದ ವೇಣುವನವನ್ನು ನಿರ್ಮಿಸಿ, ಅಲ್ಲಿ ರಾಜಗೃಹವನ್ನು ಕಟ್ಟಿಸಿಕೊಟ್ಟನಂತೆ. ಬುದ್ಧನಿಗೆ ಮತ್ತು ಬುದ್ಧನ ಅನುಯಾಯಿಗಳಿಗೆ ಏನೇನು ವ್ಯವಸ್ಥೆ ಬೇಕೋ ಅವೆಲ್ಲವನ್ನು ಮಾಡಿಸಿಕೊಟ್ಟನಂತೆ. ಕುಲುದಾಯಿಯನ್ನು ಅನುಸರಿಸಿ ಸಿದ್ಧಾರ್ಥ ಬರುವ ವೇಳೆಗೆ ಆಗಲೇ ಎರಡು ತಿಂಗಳೇ ಕಳೆದಿತ್ತು. ಇಡೀ ಕಪಿಲವಸ್ತುವಿನ ತುಂಬೆಲ್ಲಾ ಹಬ್ಬದ ಸಂಭ್ರಮ. ಮನೆಮನೆಯ ಮುಂದೂ ಅರಿಶಿನ ಕುಂಕುಮದಿಂದೊಡಗೂಡಿದ ಬಣ್ಣಬಣ್ಣದ ರಂಗೋಲಿ, ಊರ ತುಂಬಾ ಹಸಿರು ತೋರಣ, ಹೂವಿನ ಅಲಂಕಾರ. ನಾನೂ ಗೌತಮಿ ಇಬ್ಬರೂ ಈಗ ಬರುತ್ತಾನೆ ಆಗ ಬರುತ್ತಾನೆ ಎಂದು ಅರಮನೆಯಲ್ಲಿ ಕಾಯುತ್ತಿದ್ದರೆ ಬುದ್ಧ ಅವರಿವರ ಮನೆಯ ಮುಂದೆ ಭಿಕ್ಷೆ ಬೇಡುತ್ತಿರುವನೆಂಬ ಸುದ್ದಿ